**3) ಸಸ್ಯ ಹೇನು**

**ಹಾನಿಯ ಲಕ್ಷಣಗಳು**

- ಹಸಿರು ಅಪ್ಸರೆಗಳು ಮತ್ತು ಕಂದು ಬಣ್ಣದ ಹೇನುಗಳು ಎಲೆಗಳ ತಳಭಾಗದಿಂದ ಮತ್ತು ಎಳೆಯ ರೆಂಬೆಗಳಿಂದ ರಸ ಹೀರುತ್ತವೆ. ಇದರಿಂದ ಎಲೆಗಳು ಹಳದಿಯಾಗಿ, ನಂತರ ಉದುರಿ ಬೀಳುತ್ತವೆ ಮತ್ತು ಕಪ್ಪು ಬೂಷ್ಟು ಬೆಳವಣಿಗೆಯಾಗುತ್ತವೆ.

**ನಿರ್ವಹಣಾ ಕ್ರಮಗಳು**

- ಪ್ರತಿ ಲೀಟರ್ ನೀರಿನಲ್ಲಿ 1 ಮಿ. ಲೀ. ಡೈಕ್ಲೋರೋವಾಸ್ 76 ಇ.ಸಿ. ಬೆರೆಸಿ ಸಿಂಪಡಿಸಬೇಕು.



**4) ಥ್ರಿಪ್ಸ್**

**ಹಾನಿಯ ಲಕ್ಷಣಗಳು**

- ಕಪ್ಪು ಬಣ್ಣದ ಥ್ರಿಪ್ಸ್‌ಗಳು ಎಲೆಗಳಿಂದ ರಸ ಹೀರುವುದರಿಂದ ಎಲೆಗಳು ಮೇಲೆ ಬಿಳಿ ಗೆರೆಗಳಾಗುತ್ತದೆ. ಈ ಬಾಧೆಗೊಳಗಾದ ಗಿಡದ ಹೂವುಗಳ ಬಣ್ಣ ಬದಲಾಗಿ ಅವು ಒಣಗುತ್ತವೆ.

**ನಿರ್ವಹಣಾ ಕ್ರಮಗಳು**

- ಪ್ರತಿ ಲೀಟರ್ ನೀರಿನಲ್ಲಿ 1 ಮಿ. ಲೀ. ಡೈಕ್ಲೋರೋವಾಸ್ 76 ಇ.ಸಿ. ಬೆರೆಸಿ ಸಿಂಪಡಿಸಬೇಕು.



**ರೋಗಗಳು**

**1) ಬುಡ ಕೊಳೆ ರೋಗ**

**ಹಾನಿಯ ಲಕ್ಷಣಗಳು**

- ರೋಗಕ್ಕೆ ತುತ್ತಾದ ಗಿಡವು ಪ್ರಾಥಮಿಕವಾಗಿ ಹಳದಿ ಬಣ್ಣಕ್ಕೆ ತಿರುಗಿ ನಂತರ ಕೆಂಪು ಕಂದು, ಕೊನೆಗೆ ಕಪ್ಪು ಬಣ್ಣಕ್ಕೆ ತಿರುಗಿ ಗಿಡ ಸಾಯುತ್ತದೆ.

**ನಿರ್ವಹಣಾ ಕ್ರಮಗಳು**

- ಬುಡ ಕೊಳೆ ರೋಗ ನಿಯಂತ್ರಿಸಲು 1 ಗ್ರಾಂ ಕಾರ್ಬೆನ್‌ಡೈಜಿಮ್ 50 ಡಬ್ಲ್ಯೂ.ಪಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಭೂಮಿಗೆ ಹಾಕಬೇಕು.

**2) ಎಲೆ ಮುಟುರು ರೋಗ**

**ಹಾನಿಯ ಲಕ್ಷಣಗಳು**

- ಎಲೆಯಲ್ಲಿ ಹಳದಿ ಮಿಶ್ರಿತ ಹಸಿರು ಮತ್ತು ಅಂಚುಗಳು ಮುದುಡಿಕೊಂಡಿರುವುದನ್ನು ಕಾಣಬಹುದು. ಅಲ್ಲದೆ ಈ ಸಮಸ್ಯೆಯಿಂದ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

**ನಿರ್ವಹಣಾ ಕ್ರಮಗಳು**

- ಎಲೆ ಮುಟುರು ರೋಗಕ್ಕೆ ತುತ್ತಾದ ಸಸಿಗಳನ್ನು ಕಿತ್ತು ಹಾಕಿ, ರೋಗ ಹರಡುವುದನ್ನು ತಡೆಗಟ್ಟಬೇಕು.

**3) ಎಲೆ ಚುಕ್ಕೆ ರೋಗಗಳು**

**ಅ) ಆಲ್ಟರ್ನೇರಿಯಾ ಎಲೆ ಚುಕ್ಕೆ ರೋಗ**

**ಹಾನಿಯ ಲಕ್ಷಣಗಳು**

- ರೋಗಕ್ಕೆ ಪೀಡಿತವಾದ ಗಿಡದ ಎಲೆಗಳ ಮೇಲೆ ಸಣ್ಣ ವೃತ್ತಾಕಾರದ ಅಥವಾ ಅನಿಯಮಿತ ಹಳದಿ ಕಲೆಗಳು ಕಾಣಿಸಿಕೊಳ್ಳುತ್ತವೆ.

**ಆ) ಸೆಪ್ಟೋರಿಯಾ ಎಲೆ ಚುಕ್ಕೆ ರೋಗ**

**ಹಾನಿಯ ಲಕ್ಷಣಗಳು**

- ಕೆಳಗಿನ ಎಲೆಗಳಲ್ಲಿ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ ಅಲ್ಲದೆ ಎಲೆಗಳ ಮೇಲೆ ಸಣ್ಣ ವೃತ್ತಾಕಾರದ ಕಲೆಗಳೊಂದಿಗೆ ಕಂದು ಅಂಚುಗಳು ಕಾಣಿಸಿಕೊಳ್ಳುತ್ತವೆ.

**ನಿರ್ವಹಣಾ ಕ್ರಮಗಳು**

- 2 ಗ್ರಾಂ ಮ್ಯಾಂಕೋಜೆಬ್ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು

ಚೆಂಡು ಹೂ ಬೇಸಾಯವು ರೈತರಿಗೆ ಹೆಚ್ಚು ಲಾಭ ತರುವ ಹೂವಿನ ಬೆಳೆಯಾಗಿದ್ದು, ಸೂಕ್ತ ರೀತಿಯಲ್ಲಿ ತೋಟದ ನಿರ್ವಹಣೆ ಮಾಡುವುದರಿಂದ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಬಹುದು.


**ಪ್ರಕಟಣೆ:**

**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**

**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು**



*Technical Folder Series No. 02/2020*


**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**

**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು**

# ಚೆಂಡು ಹೂವಿನ ವೈಜ್ಞಾನಿಕ ಕೃಷಿ ಪದ್ಧತಿಗಳು




ತಾಂತ್ರಿಕ ಮಾಹಿತಿ

ಡಾ. ಕೇದಾರನಾಥ

ಡಾ. ರಶ್ಮಿ ಆರ್.

ಡಾ. ರಮೇಶ ಟಿ. ಜೆ.

ಶ್ರೀಮತಿ ಸಂಘಮಿತ್ರೆ ವಿ. ಕೆ.

ಡಾ. ಚೇತನ್ ಎನ್.

ಡಾ. ನವೀನ್‌ಕುಮಾರ್ ಬಿ. ಟಿ.

ಡಾ. ಮಲ್ಲಿಕಾರ್ಜುನ್ ಎಲ್.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,

ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,

ಮಂಗಳೂರು, ದಕ್ಷಿಣ ಕನ್ನಡ – 575002

www.kvkdk.org, kvkdk@rediffmail.com, 0824-2431872



ಮಾರ್ಚ್, 2020

ಕರ್ನಾಟಕ ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮೀಣ, ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಚೆಂಡು ಹೂವನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ. ಈ ಬೆಳೆಯು ವಿಶಾಲ ಪ್ರದೇಶಕ್ಕೆ ಹೊಂದಾಣಿಕೆ, ಆಕರ್ಷಕ ಬಣ್ಣಗಳು, ಆಕಾರ, ಗಾತ್ರ ಮತ್ತು ಉತ್ತಮ ಗುಣಮಟ್ಟದಿಂದಾಗಿ ಚೆಂಡು ಹೂವು ಜನಪ್ರಿಯತೆಯನ್ನು ಗಳಿಸಿದೆ. ಈ ಹೂವನ್ನು ಹಾರ ತಯಾರಿಸಲು, ದೇವರ ಪೂಜೆಗೆ ಹಾಗೂ ಸಮಾರಂಭಗಳಲ್ಲಿ ವೇದಿಕೆಗಳ ಅಲಂಕಾರಕ್ಕೆ ಬಳಸಲಾಗುತ್ತದೆ. ಈ ಹೂವಿಗೆ ದಸರಾ, ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ ಬಹಳ ಬೇಡಿಕೆಯಿರುತ್ತದೆ.

ಪ್ರಸ್ತುತ ನಮ್ಮ ರಾಜ್ಯದಲ್ಲಿ ಮಳೆಯಲ್ಲಿನ ಏರುಪೇರು ಮತ್ತು ಅಂತರ್ಜಲದ ಕುಸಿತದಿಂದಾಗಿ ಅಗತ್ಯ ಪ್ರಮಾಣದಲ್ಲಿ ಕೃಷಿಗೆ ನೀರು ಲಭ್ಯವಾಗುತ್ತಿಲ್ಲ. ಈ ದಿಸೆಯಲ್ಲಿ ಸಾಂಪ್ರದಾಯಿಕ ಬೆಳೆಗೆ ಪರ್ಯಾಯವಾಗಿ ರೈತರು ಚೆಂಡು ಹೂವಿನ ಕೃಷಿಯನ್ನು ಲಾಭದಾಯಕ ಉದ್ದಿಮೆಯಾಗಿ ಕೈಗೆತ್ತಿಕೊಂಡಿದ್ದಾರೆ.

**ಮಣ್ಣು :** ಚೆಂಡು ಹೂವನ್ನು ವ್ಯಾಪಕ ಶ್ರೇಣಿಯ ಮಣ್ಣುಗಳಲ್ಲಿ ಬೆಳೆಯಬಹುದು. ಫಲವತ್ತಾದ, ಚೆನ್ನಾಗಿ ನೀರು ಬಸಿದು ಹೋಗುವ ಗೋಡು ಮಣ್ಣು ಈ ಬೆಳೆಗೆ ಸೂಕ್ತವಾದದ್ದು. ಮಣ್ಣಿನ ರಸಸಾರ 6 ರಿಂದ 7.5 ಇರುವುದು ಉತ್ತಮ. ಒಂದು ವೇಳೆ ಮಣ್ಣಿನ ರಸಸಾರ ಅತ್ಯಂತ ಕಡಿಮೆ ಇದ್ದಲ್ಲಿ, 200 ಕಿ. ಗ್ರಾಂ ಸುಣ್ಣವನ್ನು 15 ದಿನಗಳ ಮುಂಚಿತವಾಗಿ ಮಣ್ಣಿಗೆ ಸೇರಿಸಿ ನಂತರ ರಸಗೊಬ್ಬರಗಳನ್ನು ಶಿಫಾರಸ್ಸಿನಂತೆ ಒದಗಿಸಬೇಕು.

**ನಾಟಿಕಾಲ :** ಚೆಂಡು ಹೂವನ್ನು ವರ್ಷವಿಡೀ ಬೆಳೆಯಬಹುದಾದರೂ ಮೇ-ಜೂನ್ ತಿಂಗಳಲ್ಲಿ ನಾಟಿ ಮಾಡಲು ಬಹಳ ಸೂಕ್ತ, ಏಕೆಂದರೆ, ಈ ಋತುವಿನಲ್ಲಿ ಇಳುವರಿ ಅಧಿಕವಾಗಿರುತ್ತದೆ.

**ತಳಿಗಳು :** ಆಫ್ರಿಕನ್ ಹಳದಿ, ಜೈಂಟ್ ಡಬಲ್ ಮತ್ತು ಆರೇಂಜ್ ಇವು ಪ್ರಮುಖ ತಳಿಗಳು. ಚೆಂಡು ಹೂ ಬೆಳೆ ಕೃಷಿ ಮಾಡಲು ರೈತರು ಪ್ರತಿಬಾರಿ ಬೀಜಗಳನ್ನು ಖರೀದಿಸಬೇಕು. ಆದ್ದರಿಂದ ICAR-IIHR ಸಸ್ಯಕ ಪ್ರಸರಣ ಸಾಮರ್ಥ್ಯ ಹೊಂದಿರುವ ಮೂರು ಮಿಶ್ರತಳಿಗಳನ್ನು (ಅರ್ಕ ಬಂಗಾರ, ಅರ್ಕ ಬಂಗಾರ-2 ಮತ್ತು ಅರ್ಕ ಅಗ್ನಿ) ಅಭಿವೃದ್ಧಿಪಡಿಸಿದ್ದಾರೆ. ಇವುಗಳು ಹೆಚ್ಚಿನ ಇಳುವರಿ ಮತ್ತು ಉತ್ತಮ ಗುಣಮಟ್ಟವನ್ನು ಹೊಂದಿರುವುದರಿಂದ ಜನಪ್ರಿಯತೆಯನ್ನು ಗಳಿಸುತ್ತಿವೆ.

1) **ಆಫ್ರಿಕನ್ ಹಳದಿ:** ಈ ಗುಂಪಿನ ತಳಿಗಳು ಎತ್ತರವಾಗಿ (ಸುಮಾರು 3 ರಿಂದ 3.5 ಅಡಿ) ಬೆಳೆಯುತ್ತವೆ ಮತ್ತು ಹೂವಿನ ಗಾತ್ರವೂ ದೊಡ್ಡದಾಗಿರುತ್ತದೆ.

2) **ಫ್ರೆಂಚ್ ಚೆಂಡು ಹೂ:** ಈ ಗುಂಪಿಗೆ ಸೇರಿದ ತಳಿಗಳು ಗಿಡ್ಡವಾಗಿರುತ್ತವೆ (ಎತ್ತರ 30-45 ಸೆಂ. ಮೀ.) ಮತ್ತು ಇವು ಸಣ್ಣ ಗಾತ್ರದ ಹೂಗಳನ್ನು ಬಿಡುತ್ತವೆ.

3) **ಅರ್ಕ ಬಂಗಾರ:**
ಹೂವುಗಳು ಹಳದಿ ಚಿನ್ನದ ಬಣ್ಣ ಹೊಂದಿರುತ್ತದೆ. ಗಿಡಗಳನ್ನು ನಾಟಿ ಮಾಡಿದ 40-45 ದಿನಗಳ ನಂತರ ಹೂವು ಬಿಡಲು ಪ್ರಾರಂಭವಾಗಿ 60 ದಿನಗಳವರೆಗೆ ಹೂ ಬಿಡುತ್ತದೆ. ಹೂವುಗಳು ಸಾಂದ್ರವಾಗಿದ್ದು ಮಧ್ಯಮ ಗಾತ್ರದಲ್ಲಿರುತ್ತದೆ (5-6 ಸೆಂ. ಮೀ.). ಇಳುವರಿ ಸಾಮರ್ಥ್ಯ ಎಕರೆಗೆ 8-10 ಟನ್.




4) **ಅರ್ಕ ಬಂಗಾರ-2:**
ಹೂವುಗಳು ಚಿನ್ನದ ಹಳದಿ ಬಣ್ಣದಾಗಿದ್ದು, ಗಿಡಗಳನ್ನು ನಾಟಿ ಮಾಡಿದ 40-45 ದಿನಗಳ ನಂತರ ಹೂವು ಬಿಡಲು ಪ್ರಾರಂಭವಾಗಿ 60 ದಿನಗಳವರೆಗೆ ಹೂ ಬಿಡುತ್ತದೆ. ಹೂವುಗಳು ಸಾಂದ್ರವಾಗಿದ್ದು ದೊಡ್ಡ ಗಾತ್ರದಲ್ಲಿರುತ್ತದೆ (7-7.5 ಸೆಂ. ಮೀ.). ಇಳುವರಿ ಸಾಮರ್ಥ್ಯ ಎಕರೆಗೆ 8-10 ಟನ್.




5) **ಅರ್ಕ ಅಗ್ನಿ:** ಹೂವುಗಳು ಕಿತ್ತಳೆ ಬಣ್ಣವನ್ನು ಹೊಂದಿದ್ದು, ಗಿಡಗಳನ್ನು ನಾಟಿ ಮಾಡಿದ 40-45 ದಿನಗಳ ನಂತರ ಹೂವು ಬಿಡಲು ಪ್ರಾರಂಭವಾಗಿ 60 ದಿನಗಳವರೆಗೆ ಹೂ ಬಿಡುತ್ತದೆ. ಹೂವುಗಳು ಸಾಂದ್ರವಾಗಿದ್ದು ದೊಡ್ಡ ಗಾತ್ರದಲ್ಲಿರುತ್ತದೆ (7.5-8 ಸೆಂ. ಮೀ.). ಇಳುವರಿ ಸಾಮರ್ಥ್ಯ ಎಕರೆಗೆ 8-10 ಟನ್.




**ಸ್ಥಳದ ಆಯ್ಕೆ :**
ಚೆಂಡು ಹೂ ಕೃಷಿಗೆ ಬಿಸಿಲಿನ ಸ್ಥಳ ಅತಿ ಮುಖ್ಯವಾಗಿದೆ. ನೆರಳಿನಲ್ಲಿ ಸಸ್ಯ ಬೆಳವಣಿಗೆ ಹೆಚ್ಚಾಗಿದ್ದು ಹೂವುಗಳ ಉತ್ಪಾದನೆ ಕಡಿಮೆಯಿರುತ್ತದೆ.

**ಸಸ್ಯಾಭಿವೃದ್ಧಿ :**
ಚೆಂಡು ಹೂವನ್ನು ಬೀಜದಿಂದ ಮತ್ತು ಸಸ್ಯಕ ಪ್ರಸರಣದಿಂದ ಸಸ್ಯಾಭಿವೃದ್ಧಿ ಮಾಡಲಾಗುತ್ತದೆ. ಒಂದು ಹೆಕ್ಟೇರ್‌ಗೆ 250 ಗ್ರಾಂ. ಬೀಜ ಬೇಕು. ಒಂದು ಹೆಕ್ಟೇರ್ ಕ್ಷೇತ್ರಕ್ಕೆ ಬೇಕಾಗುವ ಸಸಿಗಳನ್ನು ತಯಾರಿಸಲು 6 ಮೀ. ಉದ್ದ, 1.2 ಮೀ. ಅಗಲ ಹಾಗೂ 10 ಸೆಂ. ಮೀ. ಎತ್ತರವಾಗಿರುವ 4 ಏರುಸಸಿ ಮಡಿಗಳನ್ನು ಸಿದ್ಧಗೊಳಿಸಬೇಕು.

ಪ್ರತಿ ಮಡಿಗೆ 30 ಕಿ. ಗ್ರಾಂ. ಕೊಟ್ಟಿಗೆ ಗೊಬ್ಬರ, ಅರ್ಧ ಕಿ. ಗ್ರಾಂ 15:15:15 ರ ಪ್ರಮಾಣದಲ್ಲಿ ಸಂಯುಕ್ತ ರಾಸಾಯನಿಕ ಗೊಬ್ಬರ ಹಾಕಿ ಮಣ್ಣಿನಲ್ಲಿ ಚೆನ್ನಾಗಿ ಬೆರೆಸಿ, ಬೀಜಗಳನ್ನು 7.5 ಸೆಂ. ಮೀ. ಅಂತರದಲ್ಲಿ ತೆಳುವಾಗಿ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ಅವುಗಳ ಮೇಲೆ ತೆಳುವಾಗಿ ಕೊಟ್ಟಿಗೆ ಗೊಬ್ಬರವನ್ನು ಹರಡಬೇಕು. ರೋಸ್ ಹೆಡ್ ಕ್ಯಾನಿನಿಂದ ನೀರು ಸಿಂಪಡಿಸಬೇಕು. ಬಿತ್ತಿದ 3-4 ವಾರಗಳಲ್ಲಿ ಸಸಿಗಳು ನಾಟಿಗೆ ಸಿದ್ಧವಾಗುತ್ತವೆ.

**ಕೊಯ್ಲು ಮತ್ತು ಇಳುವರಿ**
ನಾಟಿ ಮಾಡಿದ ಎರಡೂವರೆ ತಿಂಗಳಲ್ಲಿ ಹೂ ಬಿಡಲು ಆರಂಭವಾಗಿ ನಂತರ 2 ರಿಂದ ಮೂರು ತಿಂಗಳವರೆಗೂ ಮುಂದುವರೆಯುತ್ತದೆ. ಹೂವನ್ನು ತಂಪಾದ ಸಮಯದಲ್ಲಿ ಅಂದರೆ ಬೆಳಿಗ್ಗೆ ಅಥವಾ ಸಾಯಂಕಾಲದ ಹೊತ್ತಿನಲ್ಲಿ ಬಿಡಿಸುವುದು ಒಳ್ಳೆಯದು. ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಅತ್ಯಧಿಕ ಹೂಗಳು ದೊರೆಯುತ್ತವೆ. ಕೊಯ್ಲು ಮಾಡುವಾಗ ಹೂಗಳ ಜೊತೆ ಸ್ವಲ್ಪ ದೇಟು ಉಳಿಯುವಂತೆ ನೋಡಿಕೊಳ್ಳಬೇಕು. ಪ್ರತಿ ಹೆಕ್ಟೇರಿಗೆ 8,000 ರಿಂದ 10,000 ಕಿ. ಗ್ರಾಂ ಹೂಗಳ ಇಳುವರಿ ದೊರೆಯುತ್ತದೆ.

**ರೋಗ ಮತ್ತು ಕೀಟ ನಿರ್ವಹಣೆ:**
ಚೆಂಡು ಹೂವಿಗೆ ಬಾಧಿಸುವ ಪ್ರಮುಖ ಕೀಟ ಹಾಗೂ ರೋಗಗಳು:

**ಪ್ರಮುಖ ಕೀಟಗಳು**

**1) ಜಿಗಿಹುಳು**

**ಹಾನಿಯ ಲಕ್ಷಣಗಳು**

- ಜಿಗಿ ಹುಳುಗಳು ಎಲೆಯಿಂದ ರಸ ಹೀರುವುದರಿಂದ ಎಲೆಗಳ ಮೇಲೆ ಹಳದಿ ಚುಕ್ಕೆಗಳಾಗುತ್ತವೆ. ನಂತರ ಒಣಗುತ್ತವೆ.

**ನಿರ್ವಹಣಾ ಕ್ರಮಗಳು**

- ಮೊನೋಕ್ರೋಟೊಫಾಸ್ 36 ಎಸ್.ಎಲ್. ಪ್ರತಿ ಲೀಟರ್ ನೀರಿನಲ್ಲಿ 1.5 ಮಿ. ಲೀ. ಸಿಂಪರಣಾ ದ್ರಾವಣ ಬೆರೆಸಿ ಸಿಂಪಡಿಸಬೇಕು, ಅಂದರೆ ಒಂದು ಎಕರೆಗೆ 375 ಮಿ. ಲೀ. ಬಳಸಬೇಕು.

**2) ಹೂ ಮತ್ತು ಮೊಗ್ಗು ಕೊರಕ**

**ಹಾನಿಯ ಲಕ್ಷಣಗಳು**

- ಮೊಗ್ಗನ್ನು ಕೊರೆದು ರಂಧ್ರ ಮಾಡಿ ಹೂವಿನ ಭಾಗಗಳನ್ನು ತಿನ್ನುತ್ತದೆ.



**ನಿರ್ವಹಣಾ ಕ್ರಮಗಳು**

- ಮೊನೋಕ್ರೋಟೊಫಾಸ್ 36 ಎಸ್.ಎಲ್. ಪ್ರತಿ ಲೀಟರ್ ನೀರಿನಲ್ಲಿ 1 ಮಿ. ಲೀ. ಸಿಂಪರಣಾ ದ್ರಾವಣ ಬೆರೆಸಿ ಸಿಂಪಡಿಸಬೇಕು ಅಥವಾ ಕ್ವಿನಾಲ್ಫಾಸ್ 25 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ 2 ಮಿ. ಲೀ. ಬೆರೆಸಿ ಸಿಂಪಡಿಸಬೇಕು.